ಸದಸ್ಯರುಗಳು ನನಗೆ ಸಹಕಾರ ಕೊಡದಿದ್ದರೆ ವೈದ್ಯರ ಕ್ಷೇತ್ರದಲ್ಲಿ influential community ಯನ್ನು represent ಮಾಡಲು ಕಷ್ಟವಾಗುತ್ತದೆ. ಮಾನ್ಯ ಸದಸ್ಯರಾದ ಪುಟ್ಟೇಗೌಡರು ಬಹಳ ಪ್ರಾಮಾಣಿಕರು, ಅವರ ಬಗ್ಗೆ ನನಗೆ ವೈಯಕ್ತಿಕವಾಗಿ ಯಾವುದೇ ರೀತಿಯ ತಪ್ಪು ತಿಳುವಳಿಕೆ ಇಲ್ಲ. ಅವರ ಕ್ಷೇತ್ರಕ್ಕೆ ಮತ್ತು ರಾಜ್ಯದಲ್ಲಿ ಖಾಲಿ ಇರುವ ಎಲ್ಲಾ ಕಡೆ ವೈದ್ಯರುಗಳನ್ನು ತುಂಬಲು ಕ್ರಮ ತೆಗೆದುಕೊಂಡಿದ್ದೇನೆ. ಕೆ.ಪಿ.ಎಸ್.ಸಿಯಿಂದ ನೇಮಕಗೊಂಡಿರುವ 600 ವೈದ್ಯರುಗಳು ಗ್ರಾಮೀಣ ಪ್ರದೇಶಕ್ಕೆ ಹೋಗಲು ಪ್ರಾರಂಭ ಮಾಡಿದ್ದಾರೆ. ಅವರು ಕಾರ್ಯದರ್ಶಿಯವರಿಗೆ ಸರ್ಟಿಫಿಕೇಟ್‌ನ್ನು ಕೊಟ್ಟು ಡಿ.ಹೆಚ್.ಒ. ಕಛೇರಿಯಲ್ಲಿ ರಿಪೋರ್ಟ್ ಮಾಡಿಕೊಂಡು ಹೋಗುವುದು ಸ್ವಲ್ಪ ನಿಧಾನವಾಗುತ್ತದೆ. ಇಡೀ ರಾಜ್ಯದಲ್ಲಿ ಎಲ್ಲಾ ವೈದ್ಯರ ಹುದ್ದೆಗಳು ಸಹ ಖಾಲಿ ಇರುವ ಪರಿಸ್ಥಿತಿಯೇನಿಲ್ಲ. ವೈದ್ಯರುಗಳು ಎಲ್ಲೆಲ್ಲಿದ್ದರೋ ಅಲ್ಲೇ ಇದ್ದಾರೆ. ಮಾಡಿಫಿಕೇಷನ್ ಆಗುತ್ತದೆಂದು ಕಾಯುತ್ತಿದ್ದಾರೆ. ಮಾನ್ಯ ಸದಸ್ಯರನೇಕರು ಅವರ ತೊಂದರೆಗಳನ್ನು ಹೇಳಿದ್ದಾರೆ ಅದನ್ನು ಅಟೆಂಡ್ ಮಾಡಲು ಈಗಾಗಲೇ ಕ್ರಮ ತೆಗೆದುಕೊಳ್ಳಲು ಪ್ರಾರಂಭ ಮಾಡಿದ್ದೇವೆ. ಅದನ್ನು ಮಾಡಬೇಕಾದರೆ ಗೈಡ್‌ಲೈನ್ ಮೇಲೆಯೇ ಮಾಡಬೇಕಾಗುತ್ತದೆ. ಕಣ್ಣಿನ ವೈದ್ಯರನ್ನು ಕಾಲು, ಮೂಳೆ ವೈದ್ಯರ ಜಾಗಕ್ಕೆ, ಹಲ್ಲಿನ ವೈದ್ಯರನ್ನು ಪ್ರಸೂತಿ ವಿಭಾಗಕ್ಕೆ ಹಾಕಲು ಸಾಧ್ಯವಾಗುತ್ತದೆಯೇ? ಈ ವೈದ್ಯಕೀಯ ಕ್ಷೇತ್ರದಲ್ಲಿ ತಜ್ಞತೆಯನ್ನು ಪಡೆದುಕೊಂಡಿರುವ ಜನರನ್ನು ಬಳಸಿಕೊಂಡು ಜನರಿಗೆ ಸೇವೆಯನ್ನು ಎಷ್ಟು ಸಮರ್ಪಕವಾಗಿ ಮಾಡಲು ಸಾಧ್ಯವಾಗುತ್ತದೆ? ನಮಗೆ ಸರಿಯಾದ ಮಾಹಿತಿ ಇಲ್ಲದೆ ಒಂದೆರಡು ಪರ್ಸೆಂಟ್ ನ್ಯೂನತೆಗಳಾಗಿದೆ. ಅದನ್ನು ಸರಿಪಡಿಸಲು ಸೂಚನೆ ಕೊಟ್ಟಿದೇನೆ. ಅದನ್ನು ಸರಿಮಾಡಲು ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಅನೇಕ ಸದಸ್ಯರುಗಳು ಅವರವರ ಕ್ಷೇತ್ರದ ಸಮಸ್ಯೆಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಕಾನೂನಿನ ಚೌಕಟ್ಟಿನಲ್ಲಿ ಅದನ್ನು ಮಾಡಲು ಸೂಚನೆ ಕೊಟ್ಟಿದ್ದೇನೆ. ಒಂದು ವಾರದಲ್ಲಿ ಮಾಡುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಗುತ್ತಿಗೆ ಆಧಾರದ ಮೇಲೆ ವೈದ್ಯರ ನೇಮಕ ಮಾಡಿ ಕೊಳ್ಳಲು ವೈದ್ಯರ ಹುದ್ದೆ ಖಾಲಿ ಉಳಿದಿಲ್ಲ. 150-164 ವೈದ್ಯರ ಹುದ್ದೆಗಳು ಗ್ರಾಮೀಣ ಪ್ರದೇಶಗಳಲ್ಲಿ ಖಾಲಿ ಇವೆ. ಕನಿಷ್ಠ 250-300 ವೈದ್ಯರುಗಳ ಹುದ್ದೆಗಳನ್ನು ಖಾಲಿ ಇಡಲೇ ಬೇಕಾಗುತ್ತದೆ. ಇಲಾಖಾವತಿಯಿಂದ ಪ್ರತಿ ವರ್ಷ ಪಿ.ಜಿ. ಕೋರ್ಸ್ ಓದಲು ವೈದ್ಯರು ಹೋಗುವುದರಿಂದ, ಅವರು ವ್ಯಾಸಂಗದ ನಂತರ ಬಂದಾಗ ಜಾಗವನ್ನು ಕೊಡುವ ಉದ್ದೇಶದಿಂದ ಅಷ್ಟು ಹುದ್ದೆಗಳನ್ನು ಖಾಲಿ ಇಟ್ಟುಕೊಳ್ಳಬೇಕಾಗುತ್ತದೆ. ಖಾಲಿ ಇರುವ ಯಾವುದೇ ಕ್ಷೇತ್ರದಲ್ಲಿ ವೈದ್ಯರನ್ನು ತುಂಬದಿರುವ ಪ್ರಯತ್ನವನ್ನು ಮಾಡಿಲ್ಲ. ಖಾಲಿ ವೈದ್ಯರ ಹುದ್ದೆಗಳನ್ನು ತುಂಬಲು ಕಳೆದ ಎರಡೂವರೆ ವರ್ಷಗಳಲ್ಲಿ ನನ್ನ ಕೈಲಾದ ಪ್ರಯತ್ನ ಮಾಡಿದ್ದೇನೆ. ಮುಂದೆ ಕೂಡ ಮಾಡುತ್ತೇನೆ.

50ನೇ ವರ್ಷ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ 60 ವರ್ಷ ದಾಟಿದ ಖೈದಿಗಳಿಗೆ ಶಿಕ್ಷೆಯ ಅವಧಿ ಕಡಿಮೆಗೊಳಿಸುವುದು.

ಶ್ರೀ ಎ. ರಾಮ್‌ದಾಸ್ (ಕೃಷ್ಣರಾಜ್) : ಮಾನ್ಯ ಉಪಾಧ್ಯಕ್ಷರೆ, ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾಗಿದ್ದು ಈ ಸಂದರ್ಭದಲ್ಲಿ ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿರತಕ್ಕ ಅಧಿಕಾರಿ -ಗಳಿರಬಹುದು, ಸ್ವಾತಂತ್ರ್ಯ ಹೋರಾಟಗಾರರಿರಬಹುದು ಬಳುವಳಿಯಾಗಿ ಕೆಲವು ವಿಚಾರಗಳನ್ನು

ಕೊಡುವಂಥ ಸಂದರ್ಭದಲ್ಲಿ ರಾಜ್ಯದಲ್ಲಿನ ವಿವಿಧ ಜೈಲಿನಲ್ಲಿರುವ ಖೈದಿಗಳ ಶಿಕ್ಷೆಯನ್ನು ಕಡಿಮೆ ಮಾಡುವ ವಿಚಾರದಲ್ಲಿ ಮತ್ತು ಸೆಕ್ಷನ್ 433 ಸಿ.ಆರ್.ಪಿ.ಸಿ ಮತ್ತು ಆರ್ಟಿಕಲ್ 161ರ ಪ್ರಕಾರ ರಾಜ್ಯಪಾಲರಿಗೆ ಅಧಿಕಾರವಿರುವುದನ್ನು ದೃಷ್ಟಿಯಲ್ಲಿಟ್ಟು ಕೊಂಡು ನಮ್ಮಲ್ಲಿ ಯಾರು 60 ವರ್ಷ ವಯಸ್ಸನ್ನು ದಾಟಿದ್ದಾರೆ ಅಂಥ ಖೈದಿಗಳು ರಾಜ್ಯದಲ್ಲಿ ಯಾರಿದ್ದಾರೆ ಅವರನ್ನು ಬಿಡುಗಡೆ ಮಾಡತಕ್ಕದ್ದು, ಏಳು ವರ್ಷಗಳ ಶಿಕ್ಷೆಯನ್ನು ಅನುಭವಿಸಿರುವವರ್ಯಾರಿದ್ದಾರೆ ಅವರಿಗೆ ಶಿಕ್ಷೆಯ ಅವಧಿಯನ್ನು ಕಡಿಮೆ ಮಾಡತಕ್ಕದ್ದು, ಜೈಲಿನಲ್ಲಿ ಯಾರ ನಡತೆ ಚೆನ್ನಾಗಿರುತ್ತದೆ ಮತ್ತು ಇನ್ನು ಮೂರು ವರ್ಷಗಳ ಶಿಕ್ಷೆ ಇದ್ದರೆ ಅಂಥವರನ್ನು ಬಿಡುಗಡೆ ಮಾಡುವ ವಿಚಾರದಲ್ಲಿ ರಾಜ್ಯ ಸರ್ಕಾರ ನಿರ್ಣಯಕ್ಕೆ ಬಂದರೆ, ಇವತ್ತು ಆ ಖೈದಿಗಳಿಗೂ ಸಹ ನಾವು ಸಮಾಜದಲ್ಲಿ ಬದುಕಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ತಮ್ಮ ಮೂಲಕ ಈ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಉಪಾಧ್ಯಕ್ಷರೆ, ಮೈಸೂರು ಕಾರಾಗೃಹದ ಖೈದಿಗಳು ಮನವಿಯೊಂದನ್ನು ಮಾಡಿಕೊಂಡಿದ್ದಾರೆ. ಆಂಧ್ರದಲ್ಲಿ ಸುಮಾರು ಏಳು ವರ್ಷ ಶಿಕ್ಷೆಯನ್ನು ಅನುಭವಿಸಿರುವವರಿಗೆ ಜೀವಾವಧಿ ಶಿಕ್ಷೆಯುಳ್ಳವರಿಗೆ ಬಿಡುಗಡೆ ಮಾಡುವ ತೀರ್ಮಾನವನ್ನು ಈಗಾಗಲೇ ತೆಗೆದುಕೊಂಡಿದ್ದಾರೆ. ಸುಮಾರು 900 ಖೈದಿಗಳನ್ನು ಬಿಡುಗಡೆ ಮಾಡುತ್ತಿದ್ದಾರೆ. ಅದೇ ರೀತಿ ಕೇರಳದಲ್ಲಿ ಜೀವಾವಧಿ ಶಿಕ್ಷೆಗೆ ಒಳಪಟ್ಟಿರುವವರಲ್ಲಿ ಐದು ವರ್ಷ ಶಿಕ್ಷೆ ಅನುಭವಿಸಿರುವವರಿಗೆ ಬಿಡುಗಡೆ ಮಾಡುವುದಾಗಿ ಮಾತೃಭೂಮಿ ಪತ್ರಿಕೆಯಲ್ಲಿ ಪ್ರಕಟಣೆಯಾಗಿದೆ. ಆ ನಿಟ್ಟಿನಲ್ಲಿ ಮೈಸೂರಿನ ಕಾರಾಗೃಹದ 186 ಜನ ಖೈದಿಗಳು ಸಹಿ ಮಾಡಿ ಮನವಿಯನ್ನು ಕಳಿಸಿಕೊಟ್ಟಿದ್ದಾರೆ. ನಮಗೂ ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಆಚರಣೆ ಮಾಡಲೂ ಅವಕಾಶ ಕೊಡಬೇಕು ನಮ್ಮ ಅಕ್ಕಪಕ್ಕದ ರಾಜ್ಯದಲ್ಲಿ ಜೀವಾವಧಿ ಶಿಕ್ಷೆಯುಳ್ಳ ಖೈದಿಗಳಿಗೆ ಏಳು, ಐದು ವರ್ಷದ ಶಿಕ್ಷೆಯ ನಂತರ ಬಿಡುಗಡೆ ಮಾಡುತ್ತಿರುವಾಗ ನಮ್ಮ ರಾಜ್ಯದಲ್ಲೇನು ಬೇರೆ ಪದ್ಧತಿಯನ್ನು ಇಟ್ಟುಕೊಂಡಿದ್ದೀರಾ. ನಮಲ್ಲೂ ಉತ್ತಮ ಗುಣ, ನಡತೆ, ಇರುವಂಥವರು, 60 ವರ್ಷ ವಯಸ್ಸಾಗಿರುವವರನ್ನು ಬಿಡುಗಡೆ ಮಾಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಇಂದು ಇಲ್ಲವೆ ನಾಳೆಯೊಳಗೆ ಸುವರ್ಣಮಹೋತ್ಸವವನ್ನು ಆಚರಿಸುತ್ತಿರುವುದರಿಂದ ಜರೂರಾಗಿ ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಸಂಬಂಧಪಟ್ಟ ಮಂತ್ರಿಯವರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಉಪಾಧ್ಯಕ್ಷರೆ, ಮೈಸೂರು ಜೈಲು ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ, ಜೈಲಿನಲ್ಲಿ ಹಲವಾರು ಮಂದಿಗೆ ಬಹಳ ವಯಸ್ಸಾಗಿರುತ್ತದೆ ಅಂಥವರನ್ನು ಬಿಡುಗಡೆ ಮಾಡತಕ್ಕ ವ್ಯವಸ್ಥೆಯಾಗುತ್ತಿಲ್ಲ. ಆಂಧ್ರದಲ್ಲಿ ಏಳು ವರ್ಷಕ್ಕೆ ಬಿಡುಗಡೆ ಮಾಡುತ್ತಿದ್ದಾರೆ. ಅಲ್ಲಿ 900 ಜನರನ್ನು ಬಿಡುಗಡೆ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ 12 ವರ್ಷ ಶಿಕ್ಷೆಯನ್ನು ಅನುಭವಿಸಿರುವ 32 ಜನರಿಗೆ ಬಿಡುಗಡೆಯಾಗುತ್ತಿರುವ ವ್ಯವಸ್ಥೆಯಾಗುತ್ತಿದೆ. ಮುಂದಿನ ವರ್ಷ ಮತ್ತೆ ಸ್ವಾತಂತ್ರ್ಯದ ಸುವರ್ಣ

ಮಹೋತ್ಸವ ಬರುವುದಿಲ್ಲ. ಆದ್ದರಿಂದ ಈ ವರ್ಷ ಉಪಯೋಗ ಮಾಡಿಕೊಂಡು ಆಂಧ್ರದಲ್ಲೇನು ಳು ವರ್ಷ ಶಿಕ್ಷೆ ಅನುಭವಿಸಿರುವವರಿಗೆ ಬಿಡುಗಡೆ ಮಾಡುತ್ತಿದ್ದಾರೆ ಅದರಂತೆ ನಮ್ಮ ರಾಜ್ಯದಲ್ಲೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಜೈಲು ವಿಚಾರದ ಬಗ್ಗೆ ಮಾತನಾಡುವುದಕ್ಕೆ ಕೊನೆಯಲ್ಲಿ ವಕಾಶ ಕೊಡುತ್ತೇನೆ ಎಂದು ಹೇಳಿದ್ದೀರಿ. ಇದೇ ಸಂದರ್ಭದಲ್ಲಿ ಮಾತನಾಡಿ ಎಂದು ಅವಕಾಶ ೀಡಿದರೆ ಮಾತನಾಡುತ್ತೇನೆ. ನಿನ್ನೆ ದಿನ ಬೆಳಿಗ್ಗೆ ಕೇಂದ್ರ ಕಾರಾಗೃಹದಲ್ಲಿ ಖೈದಿಗಳು ದಾಂಧಲೆ ಮಾಡಿ, ಲ್ಲಿನ ಗೋಡೆಗಳನ್ನು ಕೆಡವಿ ಹೊರಗಡೆ ನುಗ್ಗಿ ಅಲ್ಲಿರತಕ್ಕ ಪೋಲೀಸ್ ಅಧಿಕಾರಿಗಳನ್ನು ಸುತ್ತುವರೆದು ಂದು ದೊಡ್ಡ ಪರಿಸ್ಥಿತಿ ಆಗಿದೆ. ಅವರ ಅನೇಕ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ. ೈಲಿನಲ್ಲಿ ಈ ಪರಿಸ್ಥಿತಿ ಇದ್ದರೆ, ಅಲ್ಲಿರತಕ್ಕ ಖೈದಿಗಳು ಗೋಡೆಯನ್ನು ಕೆಡವಿ ಹೊರಗಡೆ ಬರತಕ್ಕ ರಿಸ್ಥಿತಿ ನಮ್ಮ ಜೈಲಿನಲ್ಲಿ ಇರುವುದಾದರೆ, ನೀವು ಜೈಲಿನ ಬಗ್ಗೆ ಏನು ಗಮನಹರಿಸಿದ್ದೀರಿ, ನೀವು ೈದಿಗಳನ್ನು ಸುಬದ್ಧವಾಗಿ ಒಳಗಡೆ ಇಟ್ಟಿದ್ದೇವೆ ಎಂದು ಹೇಳುತ್ತೀರಿ, ಅನೇಕ ಕಡೆಗಳಲ್ಲಿ ಶಾಂತಿ ವ್ಯವಸ್ಥೆಯನ್ನು ಕಾಪಾಡುವುದಕ್ಕೋಸ್ಕರ ಈ ರೀತಿ ಖೈದಿಗಳನ್ನು ಒಳಗಿಡುತ್ತೇವೆ ಎಂದು ಹೇಳುತ್ತೀರಿ, ಖೈದಿಗಳೇ ಗೋಡೆ ಕಡವಿ ಹೊರಗಡೆ ಬರತಕ್ಕ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ತಾವು ನು ಕ್ರಮ ಕೈಗೊಂಡಿದ್ದೀರಿ? ತಾವು ಯಾರಾದರೂ ಜೈಲಿಗೆ ಹೋಗಿದ್ದೀರಾ, ಜೈಲ್ ಮಂತ್ರಿಗಳು ಲಿಗೆ ಹೋಗಿ ಅದರ ಪರಿಸ್ಥಿತಿಯನ್ನು ನೋಡಿದ್ದಾರಾ, ಅಲ್ಲಿನ ಗೋಡೆ ವ್ಯವಸ್ಥೆ, ಬದ್ಧತೆ ವ್ಯವಸ್ಥೆ ಾರಾದರೂ ಅಲ್ಲಿ ಹೋಗಿ ನೋಡಿದ್ದೀರಾ ಪ್ರಾಮಾಣಿಕವಾಗಿ ಹೇಳಿ. ನೀವು ಅಲ್ಲಿಗೆ ಹೋಗದೆ ೀಲೀಸ್ ಅಧಿಕಾರಿಗಳ ಹೇಳಿಕೆಗಳನ್ನು ಕೇಳಿಕೊಂಡು ಬಂದು ಇಲ್ಲಿ ಮಾತನಾಡುತ್ತೀರಾ. ಗೃಹ ಂತ್ರಿಗಳಾಗಲೀ, ಬಂದಿಖಾನೇ ಮಂತ್ರಿಗಳಾಗಲೀ ಹೋಗಿಲ್ಲ. ನಮ್ಮ ಬಂದೀಖಾನೆ ಮಂತ್ರಿಗಳು ಾಡಿದಂತ ಅತ್ಯಂತ ದೊಡ್ಡ ಸಾಧನೆ ಎಂದರೆ, ಖೈದಿಗಳನ್ನು ಪರಿವರ್ತನೆ ಮಾಡುತ್ತೇವೆ ಎಂದು. ರಿಗೆ ಓದಲಿಕ್ಕೆ ಬಸವೇಶ್ವರರ ವಚನದ ಪುಸ್ತಕಗಳನ್ನು ಕೊಟ್ಟು ಬಂದಿದ್ದು, ಎಲ್ಲಾದರೂ ಉಂಟೆ. ೀಣನ ಮುಂದೆ ಕಿಂದಿರಿ ಬಾರಿಸಿದ ಹಾಗೆ ಎಂದು ಖೈದಿಗಳು ಬದಲಾವಣೆ ಆಗದಿದ್ದರೆ ನಮ್ಮ ಶದ ಗತಿ ಏನಾಗುತ್ತದೆ? ಪಾಪ ಯಾವ ಸ್ವಾಮೀಜಿಯೂ ಜೈಲಿಗೆ ಹೋಗಿರಲಿಲ್ಲ. ಆದರೆ, ಆ ಕ್ರದುರ್ಗದ ಸ್ವಾಮೀಜಿಯನ್ನು ಜೈಲಿಗೆ ಹೋಗುವ ಹಾಗೆ ಮಾಡಿದ್ದೀರಿ, ಅವರು ಒಳ್ಳೆಯದಕ್ಕಾದರೂ ೀಗಲಿ, ಕೆಟ್ಟದ್ದಕ್ಕಾದರೂ ಹೋಗಲಿ ನನಗನಿಸುತ್ತದೆ ನಮ್ಮಂಥವರ ಕೈಯಲ್ಲಿ ಪಾದಪೂಜೆಗಳನ್ನು ಡಿಸಿಕೊಳ್ಳಬೇಕಾದ ಸ್ವಾಮೀಜಿಗಳನ್ನು ಜೈಲಿಗೆ ಕಳುಹಿಸುವಂತ ಪರಿಸ್ಥಿತಿ ನಿರ್ಮಾಣ ಆಗಬಾರದು ತಕ್ಕ ಮಾತನ್ನು ಹೇಳುತ್ತೇನೆ. ಆದರೆ ಇವತ್ತು ಖೈದಿಗಳು ಹೊರಗಡೆ ಬಂದಿದ್ದಾರೆ, ಎಚ್ಚರ ತಪ್ಪಿದ್ದರೆ ಂದಿನ ಗೋಡೆಯನ್ನು ಒಡೆದು ಹೊರಗಡೆ ಬರುತ್ತಿದ್ದರು. ಜೈಲಿನ ಪರಿಸ್ಥಿತಿ ಏನು? ಸರ್ಕಾರದವರು ನ ಸುಧಾರಣೆ ಬಗ್ಗೆ ಏನು ಮಾಡಿದ್ದಾರೆ? ಜೈಲಿನ ಭದ್ರತೆ ಬಗ್ಗೆ ಏನು ವ್ಯವಸ್ಥೆ ಮಾಡಿದ್ದಾರೆ? ನ್ನೆಲ್ಲಾ ನೀವು ಮಾಡದಿದ್ದರೆ ಮುಂದೆ ಅನಾಹುತವಾಗಿ ಜೈಲಿನಿಂದ ಖೈದಿಗಳು ಹೊರಗಡೆ ಬಂದು ೃಪಾಲಾಗಿ ಹೋಗಿ ಏನಾದರೂ ಆಗಬಹುದು. ಅವರ ಬೇಡಿಕೆ ಏನೆಂದರೆ, ಊಟ ಸರಿಯಾಗಿ

ಮತ್ತು ಬೇರೆ ರಾಜ್ಯಗಳಲ್ಲಿ 14 ವರ್ಷ 10-11 ವರ್ಷಗಳಿಗೆ ಖೈದಿಗಳನ್ನು ಬಿಡುಗಡೆ ಮಾಡುತ್ತಾರೆ ಇಲ್ಲ 14 ವರ್ಷಗಳಾದರೂ ಬಿಡುಗಡೆ ಮಾಡುವುದಿಲ್ಲ ಎನ್ನತಕ್ಕದ್ದು ಅವರ ಬೇಡಿಕೆಗಳು. ತಾವು ಅದನ್ನು ಸರಿಪಡಿಸಬಹುದು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಂಥ ಅನೇಕ ವಿಚಾರಗಳನ್ನು ತಮ್ಮ ಮುಂದಿಟ್ಟು ಅವರು ಈ ಒಂದು ದಾಂಧಲೆಗೆ ಬಂದಿದ್ದರೂ, ಬರೀ ಬೇಡಿಕೆ ದೃಷ್ಟಿಯಿಂದ ದಾಂದಲೆನೋ ಅಥವಾ ಬೇರೆ ಯಾವುದಾದರೂ ದೃಷ್ಟಿಯಿಂದ ಈ ದಾಂಧಲೆಯನ್ನು ಮಾಡಿದ್ದಾರೊ ಅಥವಾ ಜೈಲನ್ನೇ ಖಾಲಿ ಮಾಡಿಸುವುದಕ್ಕೆ ಯಾವುದಾದರೂ ವ್ಯವಸ್ಥಿತ ಪಿತೂರಿ ಇದೆಯೋ ಅಥವಾ ಭೂಗತದವರು ಇವರನ್ನೆಲ್ಲಾ ಹೊರಕ್ಕೆ ಹಾಕಲಿಕ್ಕೆ ಏನಾದರೂ ವ್ಯವಸ್ಥಿತ ಸಂಚುಮಾಡಿದ್ದಾರೆಯೆ ಇವುಗಳ ಬಗ್ಗೆ ಸ್ಪಷ್ಟವಾದ ಒಂದು ಹೇಳಿಕೆಯನ್ನು ಈ ಸದನದ ಮುಂದೆ ಕೊಡಬೇಕು. ಮತ್ತು ದುರಸ್ಥಿ ಯಾವಾಗ ಮಾಡಿಸುತ್ತೀರಿ, ಭದ್ರತೆಯನ್ನು ಕಾಪಾಡುವುದಕ್ಕೆ ತಾವು ಏನು ಕ್ರಮವನ್ನು ಕೈಗೊಳ್ಳುವಿ ಇದನ್ನೆಲ್ಲಾ ತಾವು ಹೇಳಬೇಕು.

ಶ್ರೀ ಎಂ.ಸಿ. ನಾಣಯ್ಯ (ಸಂಸದೀಯ ಹಾಗೂ ಕಾನೂನು ಸಚಿವರು) : ಸನ್ಮಾನ್ಯ ಅಧ್ಯಕ್ಷರೆ 65 ವರ್ಷಕ್ಕಿಂತ ಮೇಲೆ ಕೈದಿಗಳಾಗಿರತಕ್ಕವರನ್ನು ಈ ಸ್ವತಂತ್ರೋತ್ಸವದ ಆಚರಣೆಯ ಸಂದರ್ಭದಲ್ಲಿ ಬಿಡುಗಡೆ ಮಾಡುತ್ತೇವೆ ಎಂದು ಹೇಳತಕ್ಕದ್ದು, ಒಂದು ವಿಚಾರ. ಜೀವಾವಧಿ ಶಿಕ್ಷೆಗೆ ಒಳಪಟ್ಟವರ ಕಡ್ಡಾಯವಾಗಿ 14 ವರ್ಷಗಳ ಕಾಲ ಶಿಕ್ಷೆಯನ್ನು ಅನುಭವಿಸಬೇಕು ಎನ್ನತಕ್ಕದ್ದು ನಮ್ಮ ರಾಷ್ಟ್ರದ ಒಂದು ತೀರ್ಮಾನ. 10 ವರ್ಷಕ್ಕೆ ಮೇಲ್ಪಟ್ಟು ಶಿಕ್ಷೆಯನ್ನು ಅನುಭವಿಸಿದ್ದು ಒಳ್ಳೆಯ ನಡತೆಯನ್ನು ಹೊಂದಿದ್ದರೆ ಅವರನ್ನು ಬಿಡುಗಡೆ ಮಾಡಬೇಕು ಎನ್ನುವುದರ ಬಗ್ಗೆ ಕೇಂದ್ರ ಹಾಗೂ ರಾಜ್ಯಸರ್ಕಾರ ಪತ್ರವನ್ನು ಬರೆದಿದ್ದೇವೆ. ಅದು ತಮಗೂ ಸಹ ಗೊತ್ತಿದೆ. 10 ವರ್ಷಕ್ಕೆ ಮೇಲ್ಪಟ್ಟು ಒಳ್ಳೆಯ ನಡತೆಯನ್ನು ಹೊಂದಿದ್ದರೆ, ಪೆರೋಲ್ ಮೂಲಕ ಬಿಡುಗಡೆ ಮಾಡತಕ್ಕದ್ದು, ಅಲ್ಲದೆ ಜೀವಾವಧಿ ಶಿಕ್ಷೆಯಲ್ಲದೆ ಬೇರೆ ಶಿಕ್ಷೆಗೆ ಒಳಗಾಗಿದ್ದು ಒಳ್ಳೆಯ ನಡತೆ ಹೊಂದಿದ್ದರೆ ಅವರಿಗೆ ರೆಮಿಶನ್ ಕೊಡತಕ್ಕದ್ದು, ಇದ ಸರ್ವೇಸಾಮಾನ್ಯವಾಗಿ ಎಲ್ಲಾ ರಾಜ್ಯಗಳಲ್ಲೂ ಮಾಡಿಕೊಂಡು ಬಂದಿರತಕ್ಕದ್ದು, ಇವತ್ತು ತಾವು ಈ ವಿಷಯವನ್ನು ಎತ್ತಿದ್ದೀರಿ, ಬಹುಶಃ ರಾಜ್ಯಸರ್ಕಾರದ ವತಿಯಿಂದ ಒಳ್ಳೆಯ ನಡತೆಗೆ ಸಂಬಂಧಿಸಿ ಹಾಗೆ ಕೆಲವು ಶಿಫಾರಸ್ಸುಗಳನ್ನು ಮಾಡಿದ್ದಾರೆ ಎನ್ನತಕ್ಕದ್ದು ನನ್ನ ಗಮನಕ್ಕೂ ಬಂದಿದೆ. ಆದರೆ ನೇರವಾ ಇದಕ್ಕೆ ಸಂಬಂಧಿಸಿದ ಮಾಹಿತಿ ನನ್ನ ಬಳಿ ಇಲ್ಲ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಅವರ ಮನೆಯ ಏನೋ ತೊಂದರೆ ಬಂದಿದ್ದರಿಂದ ಉಪಾಧ್ಯಕ್ಷರೆ ಅಪ್ಪಣೆಯೆನ್ನು ಪಡೆದುಕೊಂಡು ಮನೆಗೆ ಹೋಗಿದ್ದಾರೆ ನನ್ನ ಬಳಿ ನಿಖರವಾದ ಮಾಹಿತಿ ಇಲ್ಲ. ನಿಯಮಾವಳಿಗಳಿಗೆ ಒಳಪಟ್ಟು ಸ್ವಾತಂತ್ರೋತ್ಸವದಂದು ಖೈದಿಗಳನ್ನು ಬಿಡುಗಡೆ ಮಾಡತಕ್ಕದ್ದನ್ನು ನಮ್ಮ ರಾಜ್ಯ ಸರ್ಕಾರ ಈಗಾಗಲೇ ಕಾರ್ಯಾಚರಣೆ ತಂದಿರಬಹುದು. ಜೈಲು ಮಂತ್ರಿಗಳಿಂದ ನಿಮಗೆ ನಿಖರವಾದ ಮತ್ತು ಲಿಖಿತವಾದ ಉತ್ತರವನ್ನು 18ನೇ ತಾರೀಖಿನೊಳಗೆ ಕೊಡಲಿಕ್ಕೆ ಸಾಧ್ಯ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : 15ನೇ ತಾರೀಖು ಸ್ವಾತಂತ್ರೋತ್ಸವ ಇದೆ. ಅಷ್ಟರಲ್ಲಿ ಸರ್ಕಾರ ತನ್ನ ಸ್ಪಷ್ಟವಾದ ವಿಚಾರವನ್ನು ಹೇಳಬೇಕು. ಇಷ್ಟೊಂದು ಅರ್ಜೆಂಟ್ ಇಲ್ಲದೇ ಹೋಗಿದ್ದರೆ, ನಾ

ಕೇಳುತ್ತಲೇ ಇರಲಿಲ್ಲ. ಸ್ವಾತಂತ್ರ್ಯೋತ್ಸವ 15ನೇ ತಾರೀಖು ಇರುವುದರಿಂದ ಅಷ್ಟರೊಳಗೆ ತಾವು ಕೊಡತಕ್ಕ ಕೊಡುಗೆ ಏನು ಎಂಬುದನ್ನು ಹೇಳಬೇಕು.

ಶ್ರೀ ಎಂ.ಸಿ. ನಾಣಯ್ಯ : ನಿಯಮಾವಳಿಗಳ ಅಡಿಯಲ್ಲಿ ಉತ್ತಮ ನಡತೆಯಿಟ್ಟು ಹೊಂದಿರತಕ್ಕ ಖೈದಿಗಳನ್ನು ಆಗಸ್ಟ್ 15, ಜನವರಿ 26, ಮತ್ತು ನವೆಂಬರ್ 1 ರಂದು ಬಿಡುಗಡೆ ಮಾಡುವ ಕಾರ್ಯಕ್ರಮವನ್ನು ಪ್ರತಿವರ್ಷವೂ ರಾಜ್ಯಸರ್ಕಾರ ಮಾಡುತ್ತಾ ಬಂದಿದೆ. ಬಹುಶಃ ಈ ಕೆಲಸವನ್ನು ರಾಜ್ಯಸರ್ಕಾರ ಮತ್ತು ಜೈಲು ಇಲಾಖೆಯಿಂದ ಈಗಾಗಲೇ ಮಾಡಿರಲೂಬಹುದು. ತಾವು ತಂದಿರತಕ್ಕ ವಿಚಾರವನ್ನು ಅವರು ಖಂಡಿತವಾಗಿ ಮಾಡಿರುತ್ತಾರೆ. ಮುಖ್ಯಮಂತ್ರಿಗಳು ಹಾಗೂ ಜೈಲುಮಂತ್ರಿಗಳು ಬಂದಾಗ ನಿಮ್ಮ ವಿಚಾರವನ್ನು ಅವರಿಗೆ ತಿಳಿಸಿ ನಿಯಮಾವಳಿಗಳ ಅಡಿಯಲ್ಲಿ ಯಾರನ್ನು ಬಿಡುಗಡೆ ಮಾಡುವುದಕ್ಕೆ ಸಾಧ್ಯವಿದೆ, ಹಾಗು ಅವರ ಒಳ್ಳೆಯ ನಡತೆಯ ಹಿನ್ನೆಲೆಯಲ್ಲಿ ಅದನ್ನು ಮಾಡಲಿಕ್ಕೆ ಸರ್ಕಾರ ಕ್ರಮಕೈಗೊಳ್ಳುತ್ತದೆ. ಜೀವಾವಧಿ ಶಿಕ್ಷೆಗೆ ಒಳಗಾಗಿರುವವರು 14ವರ್ಷಗಳ ಕಾಲ ಶಿಕ್ಷೆಯನ್ನು ಅನುಭವಿಸಬೇಕು ಎನ್ನುವುದು ಇವತ್ತಿನ ಒಂದು ನಿಯಮ. 10 ವರ್ಷದ ಶಿಕ್ಷೆಗೆ ಮೇಲ್ಪಟ್ಟು ಒಳ್ಳೆಯ ನಡತೆಯನ್ನು ಹೊಂದಿದ್ದರೆ ಅಂಥವರನ್ನು ಬಿಡುಗಡೆ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ. ವೀರಪ್ಪಮೊಯಿಲಿಯವರ ಕಾಲದಲ್ಲೂ ಬರೆದಿದ್ದೆವು. ನಾವು ಸಹ ಬರೆದಿದ್ದೇವೆ. ಏಳು ವರ್ಷಕ್ಕೆ ಬಿಡುಗಡೆ ಮಾಡುವುದಕ್ಕೆ ಶಿಫಾರಸ್ಸು ಮಾಡಬೇಕಾಗುತ್ತದೆ. ಆದರೆ ಬಿಡುಗಡೆ ಮಾಡವುದಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರದ ನಿಯಮಗಳು ಎಲ್ಲಾ ರಾಜ್ಯಸರ್ಕಾರಗಳಿಗೂ ಅನ್ವಯಿಸುತ್ತದೆ. ಅದು ಒಂದು ನೀತಿಯ ಪ್ರಶ್ನೆ ಕೂಡ ಆಗಿರುವುದರಿಂದ ಕಾನೂನಿನಲ್ಲಿ ತಿದ್ದುಪಡಿ ಆಗಿಲ್ಲ. ನಮ್ಮ ರಾಜ್ಯಸರ್ಕಾರ ಆಗಸ್ಟ್ 15 ರಂದು 37 ಜನ ಖೈದಿಗಳನ್ನು ಅವರ ನಡತೆಯನ್ನು ನೋಡಿ, ಅವರು ಯಾವ ಯಾವ ಶಿಕ್ಷೆಗೆ ಒಳಪಟ್ಟಿದ್ದಾರೆ ಎಂಬುದನ್ನು ನೋಡಿ, ಮತ್ತು ಜೈಲು ಅಧಿಕಾರಿಗಳ ವರದಿಯನ್ನು ಪರಿಶೀಲನೆ ಮಾಡಿ ಅವರ ಶಿಕ್ಷೆಯ ಅವಧಿ ಮುಗಿಯುವ ಮುಂಚೆಯೇ ಆಗಸ್ಟ್ 15 ರಂದು 37 ಜನ ಖೈದಿಗಳನ್ನು ಬಿಡುಗಡೆ ಮಾಡುತ್ತಿದೆ. ಬಹುಶಃ ಇದರಲ್ಲಿ ಜೀವಾವಧಿ ಶಿಕ್ಷೆಗೆ ಒಳಪಟ್ಟವರು ಸೇರಲಿಕ್ಕಿಲ್ಲ. ಬಾಕಿಯವರನ್ನು ಬಿಡುಗಡೆ ಮಾಡಲಿಕ್ಕೆ ಸರ್ಕಾರ ಈಗಾಗಲೇ ಸರ್ಕಾರ ತೀರ್ಮಾನ ಕೈಗೊಂಡಿದೆ ಬಹುಶಃ ಆದೇಶವನ್ನು ಸಹ ಕೊಟ್ಟಿರಬಹುದು. ವಾಟಾಳ್ ನಾಗರಾಜ್‌ರವರು ಒಂದು ಮೂಲಭೂತವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಅದಕ್ಕೆ ನಿಖರವಾದ ಉತ್ತರ ಕೊಡಬೇಕಾಗುತ್ತದೆ. ಇಲ್ಲಿರತಕ್ಕ ಕೇಂದ್ರ ಕಾರಾಗೃಹವನ್ನು ಸ್ಥಳಾಂತರ ಮಾಡಬೇಕೆನ್ನುವ ಒಂದು ಚಿಂತನೆ ಇದೆ. 700 ಜನ ಖೈದಿಗಳಿಗೆ ಮಾತ್ರ ಇಲ್ಲಿ ಇರಲಿಕ್ಕೆ ಸಾಧ್ಯ. ಆದರೆ 2,200 ಜನ ಖೈದಿಗಳು ಇದ್ದಾರೆ. ಮತ್ತು ಎಲ್ಲಾ ವರ್ಗದ ಖೈದಿಗಳು ಇದ್ದಾರೆ. ವಾಟಾಳ್ ನಾಗರಾಜ್‌ರವರು ಒಂದು ಮಾತನ್ನು ಕೇಳಿದರು, ನೀವು ಜೈಲಿಗೆ ಹೋಗಿದ್ದೀರಾ ಎಂದು ನಾನು ಜೈಲಿಗೆ ಹೋಗಲಿಕ್ಕೆ ತಯಾರು ಇಲ್ಲ. ನೀವು ಬೇಕಾದರೆ ಹೋಗಿಯಪ್ಪ.

ಶ್ರೀ ವಾಟಾಳ್ ನಾಗರಾಜ್ : ನಾನು ಈಗಾಗಲೇ ಎರಡು ಸಲ ಹೋಗಿ ಬಂದಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ : ಹಾಗಾದರೆ ನಾಳೆ ನಿಮಗೆ ರಾಜಕೀಯ ಮಾಸಾಶನ ಸಿಗಬಹುದು ಸೋಮಣ್ಣನವರು ಯಾವುದೋ ಸ್ವಾಮೀಜಿಯನ್ನು ಕರೆದುಕೊಂಡು ಹೋದಂತಹ ವಿಚಾರ ಹೇಳಿದಿರಿ. ಅವರು ಯಾವ ಚಿಂತನೆಯ ಹಿನ್ನೆಲೆಯಲ್ಲಿ ಅವರನ್ನು ಕರೆದುಕೊಂಡು ಹೋದರು ಎನ್ನುವುದಕ್ಕೆ ಅವರೇ ಉತ್ತರವನ್ನು ಕೊಡಬೇಕು. ಆದರೆ ಸ್ವಾಮೀಜಿ, ಬಸವಣ್ಣನವರ ವಚನಗಳು, ಬಸವಣ್ಣನವರ ಪುಸ್ತಕ ಇವೆಲ್ಲಾ ಮನುಷ್ಯನನ್ನು ಪರಿವರ್ತನೆ ಮಾಡಲಿಕ್ಕೆ ಇರತಕ್ಕ ಒಂದು ಒಳ್ಳೆಯ ಸಾಹಿತ್ಯಗಳು. ಅದರಲ್ಲಿ ಬಸವಣ್ಣನ ವಚನಗಳು ಒಂದು. ಅದನ್ನು ನಾನು ಒಪ್ಪಿದ್ದೇನೆ, ನಂಬಿದ್ದೇನೆ. ಎಲ್ಲಾದರೂ ಅವರ ಮನಪರಿವರ್ತನೆಯಾಗಿ, ಒಳಗಡೆ ಇರತಕ್ಕಂಥವರು ಹೊರಗಡೆ ಬಂದ ಮೇಲೆ, ಅವರ ಒಂದು ಚಿಂತನೆಯನ್ನು, ಅವರ ಶ್ಲೋಕದಲ್ಲಿರತಕ್ಕಂಥ ಉದಾತ್ತವಾದ ವೈಶಾಲ್ಯತೆಯನ್ನು ಕಂಡು ಮನಪರಿವರ್ತನೆಯಾಗಿ ಅವರೂ ಕೂಡ ಮುಖ್ಯ ವಾಹಿನಿಗೆ ಬಂದರೆ, ಅದನ್ನು ತಪ್ಪು ಎಂದು ಹೇಳಲು ನಾನು ತಯಾರಾಗಿಲ್ಲ. ನಾನು ಹೇಳುತ್ತೇನೆ, ಅವರು ಮಾಡಿರತಕ್ಕಂಥ ಕೆಲಸಗಳಲ್ಲಿ ಹೀಗೆ ಹತ್ತಾರು ಕೆಲಸಗಳು ಹೀಗೇ ಮುಂದುವರೆದರೆ ಅದು ತಪ್ಪು ಎಂದು ನಾನು ಹೇಳುವುದಿಲ್ಲ. ಬಹುಶಃ ಆ ಕಾರ್ಯಕ್ರಮವನ್ನು ಏನೊಂದು ಉದ್ದೇಶವನ್ನಿಟ್ಟುಕೊಂಡು ಮಾಡಿದ್ದಾರೆ ಅದಕ್ಕೆ ಅವರೇ ಬಂದು ಉತ್ತರ ಹೇಳಲಿ. ಜೈಲು ಸುಧಾರಣೆ ಬಗ್ಗೆ, ಇಲ್ಲಿ ನಡೆದಿರತಕ್ಕಂಥ ವಿಚಾರದ ಬಗ್ಗೆ ಹೇಳಬೇಕಾದರೆ ಅಲ್ಲಿ ಈಗ ಬಂದಿರತಕ್ಕಂಥ ಒಬ್ಬ ಹೊಸ ಅಧಿಕಾರಿ ಯಾರಿದ್ದಾರೆ, ಅವರು ಸ್ವಲ್ಪ ಬದಲಾವಣೆ ಮಾಡಿದ್ದಾರೆ. ಹಿಂದೆ ಎಲ್ಲರನ್ನೂ ಯಾವ ಸಂದರ್ಭದಲ್ಲಿ ಬಂದರೂ ಬಿಡುವ ಒಂದು ಪದ್ಧತಿ ಇತ್ತು. ಅದರ ಪರಿಣಾಮ ಏನಾಯಿತು ಎಂದರೆ ಅವರು ಯಾರನ್ನೂ ಬೇಕಾದರೂ ಭೇಟಿ ಮಾಡಬಹುದು, ಯಾವ ಸಂದರ್ಭದಲ್ಲಿ ಬೇಕಾದರೂ ಭೇಟಿ ಮಾಡಬಹುದಾಗಿತ್ತು. ಇದರ ಪರಿಣಾಮವಾಗಿ, ಯಾವುದನ್ನೂ ಜೈಲಿನ ಒಳಗಡೆ ತೆಗೆದುಕೊಂಡು ಹೋಗಬಾರದು ಅಂಥ ವಿಚಾರಗಳನ್ನು ಕೂಡ ತೆಗೆದುಕೊಂಡು ಹೋಗಲು ಈ ಹಿಂದೆ ಅವ್ಪದವಿತ್ತು. ಈಗ ಅದಕ್ಕೆ ಕಡಿವಾಣ ಹಾಕಿದ್ದೇವೆ. ಬಹುಶಃ ಅದರಲ್ಲಿ ಬೇರೆಬೇರೆ ತರಹದ್ದು ಇರಬಹುದು. ತಮಗೆ ಗೊತ್ತಿದೆ, ಈ ಹಿಂದೆ ಹೊರಗಡೆಯಿಂದ ಒಳಗಡೆಗೆ ಅಸ್ತ್ರಗಳನ್ನು ಮತ್ತು ಅವರಿಗೆ ಬೇಕಾಗಿರತಕ್ಕಂಥ ಹತ್ಯಾರಗಳನ್ನು ಕೊಟ್ಟು, ಅವರು ಅದನ್ನು ಉಪಯೋಗಿಸಿಕೊಂಡು ಜೈಲನ್ನು ಹಾರುವಂಥ ಪರಿಸ್ಥಿತಿ ಸುಮಾರು 4-5 ವರ್ಷಗಳ ಹಿಂದೆ ನಿರ್ಮಾಣವಾಗಿತ್ತು. ಇದನ್ನೆಲ್ಲಾ ಮಾಡಲು ಕಾರಣ ಏನೆಂದರೆ, ಮೇಲುಭಾಗದಲ್ಲಿ ಇರತಕ್ಕಂಥ ಜನ ಒಳಬಾಗಕ್ಕೆ ಸಾಮಾನುಗಳನ್ನು ಬಿಸಾಡುತ್ತಿರತಕ್ಕಂಥಾದ್ದು ಕೂಡ ಗಮನಕ್ಕೆ ಬಂದಿರತಕ್ಕಂಥಾದ್ದು ಇದ್ದು, ಅದು ಪತ್ರಿಕೆಯಲ್ಲೂ ಬಂದಿದೆ. ಅವರು ಸ್ವಲ್ಪಮಟ್ಟಿಗೆ ಇದನ್ನು ತಡೆಯಲು ಹೋದಾಗ ಒಳಗಡೆ ಇರತಕ್ಕಂಥವರು ಎಲ್ಲಾ ಒಟ್ಟಾಗಿ ಸೇರಿ ಪ್ರತಿಭಟನೆ ಮಾಡಿ, ಹೊರಗಡೆ ಬರಲು ಪ್ರಯತ್ನ ಮಾಡಿದ್ದಾರೆ. ನಾಳೆ ಸದನ ಇಲ್ಲದೇ ಇರುವುದರಿಂದ ಇದರ ಬಗ್ಗೆ ಒಂದು ಹೇಳಿಕೆಯನ್ನು 18ನೇ ತಾರೀಖಿನ ದಿವಸ ಅಥವಾ 19ನೇ ತಾರೀಖಿನ ದಿವಸ ವಿವರವಾಗಿರತಕ್ಕಂಥ ವರದಿಯನ್ನು ಸರ್ಕಾರದ ವತಿಯಿಂದ ಮಂತ್ರಿಗಳ ಮುಖಾಂತರ ಕೊಡುತ್ತೇವೆ.

ಉಪಾಧ್ಯಕ್ಷರು : ಈಗ ಸುರೇಶ್‌ಕುಮಾರ್‌ರವರು. ತಾವು ಎರಡು ನಿಮಿಷದಲ್ಲಿ ಮುಗಿಸಿ.